ನಾರಾಯಣಭಟ್ಟರ ಪರಿಸ್ಥಿತಿಯರಿಯಲು ಹೊರಗಡೆ ಕುಳಿತ ಪ್ರಕಾಶ್ ಭಾಟಿಯಾ, ತನ್ನ ತಲೆಗೆ ಕಟ್ಟಿದ ಪಟ್ಟಿಯನ್ನು ಮುಟ್ಟಿ ನೋಡಿಕೊಳ್ಳುತ್ತಾ ಯೋಚಿಸತೊಡಗಿದ.

ಶ್ರೀದೇವಿ!? ಎಂಥ ಹುಡುಗಿ. ಕೆಂಪುಮಿಶ್ರಿತ ಬಿಳುಪು ಬಣ್ಣದ, ನಡುವಿನ ತನಕ ಇದ್ದ ಉದ್ದ ಜಡೆಯ ಬಳುಕಾಡುವ ಮಲ್ಲಿಗೆಯ ಬಳ್ಳಿ. ತಾಯಿಯನ್ನು ಕಳೆದುಕೊಂಡು ತಂದೆಯ ಅಕ್ಕರೆಯೇ ಜಗತ್ತೆಂದು ಅರಿತು ಬೆಳೆದ ಮುದ್ದಿನ ಮಗಳು. ಮನೆಬಿಟ್ಟು ಎಂದೂ ಹೊರಗೆ ತಲೆ ಹಾಕದ, ಹಾಕಿದರೂ ತಂದೆಯ ಜೊತೆಯೇ ಬರುತ್ತಿದ್ದ ಮುಗ್ಧೆ. ಜಿಂಕೆಯಂಥ ಚಲನೆಗಳಲ್ಲಿ ಅವಳ ಉಕ್ಕುವ ಜೀವನೋತ್ಸಾಹವನ್ನು ಯಾರು ಬೇಕಾದರೂ ಅರಿಯಬಹುದಿತ್ತು. ಆಕೆಯ ನಡೆ, ನುಡಿ, ವಿದ್ಯೆ, ವಿನಯ, ರೂಪ ಶ್ರೀಮಂತಿಕೆ ಕಪ್ಪಳ್ಳಿಯ ಜನರ ಮನೆ ಮಾತಾಗಿತ್ತು. ಅಂಥ ಮಲ್ಲಿಗೆ ಹೂವಿನ ಹುಡುಗಿಗೆ ಎಂಥ ಸಾವು? ಕಪ್ಪು ಬುರ್ಖಾದಲ್ಲಿದ್ದ ಊದಿದ ಶ್ರೀದೇವಿಯ ಮುಖ ಮತ್ತೆ ನೆನಪಾಗಿ ಭಾಟಿಯಾನ ಹೆಂಗರುಳು ಚುರ್ರೆಂದಿತು.

ಆದರೆ ಅವನ ಹೊಟ್ಟೆಗೆ ಬೆಂಕಿ ಬಿದ್ದದ್ದು ಅದೇ ಸಾಯಂಕಾಲ ಭಟ್ಟರೂ ಭಾರದ ಲೋಕಕ್ಕೆ ಹೊರಟುಹೋದರೆಂದು ತಿಳಿದಾಗ. ಭಟ್ಟರ ಮೊದಲ ಮಗಳು ಅಳಿಯ ಬಂದು ಹೆಣಗಳನ್ನು ತೆಗೆದುಕೊಂಡು ಹೋಗುವಾಗ ಇಡೀ ಆಸ್ಪತ್ರೆ ಕಪ್ಪಳ್ಳಿಯ ಜನರ ಹಾಹಾಕಾರದಿಂದ ತುಂಬಿ ಹೋಗಿತ್ತು.

★★★

ಮುಂದಿನ ಒಂದು ವಾರದಲ್ಲಿಯೇ 'ಸುಂದರಮೂರ್ತಿ ಆಯೋಗ' ತನ್ನ ವಿಚಾರಣಾ ಕಾರ್ಯ ಆರಂಭಿಸಿತ್ತು. ವಿಚಾರಣೆ ಆರಂಭವಾದದ್ದೇ ತಡ ಈ ವಿಚಾರಣೆ ಯಾಕಾದರೂ ಆರಂಭವಾಯಿತೋ ಎಂಬ ಆತಂಕ ಎರಡೂ ಜನಾಂಗದವರಲ್ಲಿ ಮೂಡಿತ್ತು. ಇಮಾಂಸಾಬರು ಕಪ್ಪಳ್ಳಿಗೆ ಬಂದ ತಕ್ಷಣ ತಮ್ಮ ಜನಾಂಗದ ಪ್ರತಿಯೊಬ್ಬ ಯುವಕರನ್ನೂ ಕರೆಸಿ ಶ್ರೀದೇವಿಯೊಂದಿಗೆ ಯಾರಾದರೂ ಪ್ರೀತಿ ಹೊಂದಿದ್ದರೆ ಎಂದು ವಿಚಾರಿಸಿದ್ದರು. ಪ್ರತಿಯೊಬ್ಬರೂ 'ಅಲ್ಲಾ'ನ ಮೇಲೆ ಆಣೆಯಿಟ್ಟು 'ಇಲ್ಲ' ಎಂದು ನಿಜವನ್ನೇ ನುಡಿದಿದ್ದರು. ಶ್ರೀದೇವಿಯ ಸ್ನೇಹಿತೆಯರು, ಹೆಂಗಸರು, ಗಂಡಸರನ್ನೆಲ್ಲಾ ಸೇರಿಸಿದ್ದ ಸಭೆಯೊಂದು ಶಿವಲಿಂಗೇಗೌಡರ ಮನೆಯಲ್ಲಿ ವಿಚಾರಣೆ ನಡೆಸಿತ್ತು.

ಶ್ರೀದೇವಿಯ ಬಗ್ಗೆ ಯಾರಿಗೂ ಕೀಳಾಗಿ ಯೋಚಿಸುವ ಶಕ್ತಿ ಇರಲಿಲ್ಲ. ಅಂಥ ಬಾಳನ್ನು ಆಕೆ ಬಾಳಿದ್ದಳು. ಸುಳ್ಳು ನುಡಿದರೆ ನಾಲಿಗೆ ಸೇದೀ ಹೋದೀತೆಂಬ ಪಾಪದ ಭಯವಿತ್ತು. ಜನರಿಗೆ ಆಕೆಯ ಬಗ್ಗೆ ಸಾವಿನ ನಂತರ ಕಾರಣವಿಲ್ಲದೆ ಅವಳ ಹೆಸರಿಗೆ ಮಸಿ ಬಳಿಯುವ ಬಗ್ಗೆ ಮನಸ್ಸಿರಲಿಲ್ಲ. ಈ ವಿಷಯದಲ್ಲಿ ಇಡೀ ಊರು ಸೌಜನ್ಯದಿಂದ ವರ್ತಿಸಿ ಒಗ್ಗಟ್ಟಾಗಿತ್ತು.

ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುವಂಥ ಸಂದರ್ಭದಲ್ಲಿ ಶ್ರೀದೇವಿಯ ಸಾವಿನ ಬಗ್ಗೆ ಮೂಡುವ ಪ್ರಶ್ನೆಗಳಿಗೆ ಕಪ್ಪಳ್ಳಿಯ ಯಾರ ಬಳಿಯಲ್ಲಿಯೂ ಉತ್ತರವಿರಲಿಲ್ಲ, ಗೌಡರಾದಿಯಾಗಿ, ಇಮಾಂಸಾಹೇಬರಾದಿಯಾಗಿ ಆಯೋಗದ ಮುಂದೆ ಬಂದವರೆಲ್ಲಾ 'ನಮಗೇನೂ ತಿಳಿದಿಲ್ಲ' ಎಂದು ಹೇಳುವ ಮಾತುಗಳನ್ನು ಕೇಳಿ ಕೇಳಿ ಸುಂದರಮೂರ್ತಿಗಳಿಗೆ ಸಾಕಾಗಿಹೋಗಿತ್ತು. ಈ ಸ್ಥಿತಿಯಲ್ಲಿ ತಮ್ಮ 'ವರದಿ' ಹೇಗೆ ಮೂಡೀತು ಎಂಬ ಆಲೋಚನೆಯಲ್ಲಿಯೇ ಇದ್ದ ಅವರಿಗೆ ಒಂದು ಮುಂಜಾನೆ ಒಂದು ಪತ್ರ ಕೈಸೇರಿತ್ತು. ಅದರ ಮೇಲೆ ಕೆಂಪು ಶಾಯಿಯಲ್ಲಿ ಇದ್ದ 'ಶ್ರೀದೇವಿಯ ಸಾವಿನ ಬಗ್ಗೆ' ಎಂಬ ದಪ್ಪಕ್ಷರಗಳು ಸುಂದರಮೂರ್ತಿಗಳಿಗೆ ನಿಧಿ ಸಿಕ್ಕಿದಷ್ಟು ಸಂತೋಷ ಕೊಟ್ಟಿತು.

★★★